## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 20 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ(ಪದವೀಧರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 04.12.2023 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ಪತ್ತೆ ಹಚ್ಚಲಾದ ಬಾಲತಾಯಂದಿರ ಸಂಖ್ಯೆ ಎಷ್ಟು; (ವರ್ಷವಾರು ಜಿಲ್ಲಾವಾರು ಮಾಹಿತಿ ನೀಡುವುದು: | ಕಳೆದ 5 ವರ್ಷಗಳಲ್ಲಿ ರಾಜ್ಯದಲ್ಲಿ ಪತ್ತೆ ಹಚ್ಚಲಾದ ಬಾಲತಾಯಂದಿರ ಸಂಖ್ಯೆಯ ವಿವರವನ್ನು ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ. |

**Districtwise Teenage Pregnancy report from RCH portal for the year 2018 to 2022**

| Sl. no | Districts | 2018 | 2019 | 2020 | 2021 | 2022 |
|---|---|---|---|---|---|---|
| 1 | Bagalkote | 127 | 53 | 43 | 61 | 300 |
| 2 | Ballari | 269 | 88 | 64 | 134 | 510 |
| 3 | Belagavi | 495 | 145 | 70 | 130 | 314 |
| 4 | Bengaluru Rural | 89 | 44 | 34 | 29 | 75 |
| 5 | Bengaluru Urban | 964 | 353 | 138 | 91 | 252 |
| 6 | Bidar | 123 | 85 | 90 | 151 | 366 |
| 7 | Chamarajanagara | 111 | 59 | 25 | 25 | 58 |
| 8 | Chikkaballapura | 100 | 94 | 86 | 115 | 161 |
| 9 | Chikkamagaluru | 100 | 60 | 52 | 59 | 105 |
| 10 | Chitradurga | 241 | 177 | 189 | 301 | 466 |
| 11 | Dakshina Kannada | 23 | 15 | 13 | 12 | 13 |
| 12 | Davanagere | 91 | 55 | 68 | 108 | 238 |
| 13 | Dharwad | 81 | 47 | 22 | 26 | 72 |
| 14 | Gadag | 26 | 5 | 4 | 7 | 35 |
| 15 | Hassan | 174 | 98 | 74 | 102 | 141 |
| 16 | Haveri | 100 | 36 | 20 | 25 | 111 |
| 17 | Kalaburagi | 126 | 48 | 52 | 55 | 387 |
| 18 | Kodagu | 38 | 29 | 27 | 21 | 56 |
| 19 | Kolar | 128 | 90 | 65 | 116 | 262 |
| 20 | Koppal | 44 | 20 | 12 | 18 | 74 |
| 21 | Mandya | 269 | 114 | 93 | 119 | 217 |
| 22 | Mysore | 279 | 264 | 191 | 188 | 387 |
| 23 | Raichur | 109 | 44 | 17 | 29 | 196 |
| 24 | Ramanagara | 81 | 42 | 26 | 19 | 81 |
| 25 | Shivamogga | 88 | 85 | 63 | 67 | 104 |
| 26 | Tumakuru | 241 | 140 | 113 | 140 | 397 |
| 27 | Udupi | 10 | 8 | 10 | 10 | 18 |
| 28 | Uttara Kannada | 45 | 19 | 22 | 13 | 26 |
| 29 | Vijayapura | 157 | 65 | 41 | 116 | 434 |
| 30 | Yadgir | 85 | 38 | 48 | 52 | 199 |
| | **Total** | **4814** | **2420** | **1772** | **2339** | **6055** |

....2

ಆ) ರಾಜ್ಯದಲ್ಲಿ ಬಾಲತಾಯಂದಿರ ಸಂಖ್ಯೆ ಹೆಚ್ಚಾಗಲು ಕಾರಣಗಳೇನು; ಇದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)

ರಾಜ್ಯದಲ್ಲಿ ಬಾಲತಾಯಂದಿರ ಸಂಖ್ಯೆ ಹೆಚ್ಚಾಗಲು ಕಾರಣಗಳು ಈ ಕೆಳಕಂಡಂತಿವೆ.

1. ಬಾಲ್ಯ ವಿವಾಹ
2. ಅನಕ್ಷರತೆ ಮತ್ತು ಬಡತನ
3. ವಲಸೆ ಹೋಗುವ ಪ್ರವೃತ್ತಿ
4. ಸಾಮಾಜಿಕ ಅಭದ್ರತೆ
5. ಕುಟುಂಬ ಕಲ್ಯಾಣ ವಿಧಾನಗಳ ಅರಿವು ಇಲ್ಲದಿರುವುದು
6. ಹುಡುಗಿಯರ ಅಭಿಪ್ರಾಯಕ್ಕೆ ಮನ್ನಣೆ ನೀಡದಿರುವುದು

ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ಶಾಲಾ- ಕಾಲೇಜುಗಳಲ್ಲಿ ಹಾಗೂ ಸಾರ್ವಜನಿಕರಲ್ಲಿ ಬಾಲ್ಯವಿವಾಹ ಮತ್ತು ಬಾಲತಾಯಂದಿರ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಮತ್ತು ಇದನ್ನು ತಡೆಗಟ್ಟಲು ಸರ್ಕಾರದಿಂದ ವಿವಿಧ ಇಲಾಖೆಯಿಂದ ಜಾರಿಯಲ್ಲಿರುವ ಯೋಜನೆ/ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಬಾಲತಾಯಂದಿರ ಸಂಖ್ಯೆಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಆರೋಗ್ಯ ಅಪೌಷ್ಟಿಕತೆ ಸೇರಿದಂತೆ ಇತರೆ ಸಮಸ್ಯೆಗಳಿಂದ ಬಳಲುತ್ತಿರುವ ಬಾಲತಾಯಂದಿರ (ತಾಯಿ & ಮಗು) ಸುರಕ್ಷತೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಿಗೆ ದಾಖಲಾಗಿರುವ ಎಲ್ಲಾ ಗರ್ಭಿಣಿ ಮತ್ತು ಬಾಣಂತಿಯರಿಗೆ ಮಾತೃಪೂರ್ಣ ಯೋಜನೆಯಡಿ ಮಧ್ಯಾಹ್ನದ ಬಿಸಿ ಊಟದ ಜೊತೆ ಬೇಯಿಸಿದ ಮೊಟ್ಟೆ, 200 ಮಿ.ಲೀ ಹಾಲು ಮತ್ತು ಚಿಕ್ಕಿಯನ್ನು ತಿಂಗಳಿಗೆ ಕನಿಷ್ಠ 25 ದಿನಗಳು ನೀಡಲಾಗುತ್ತಿದೆ. ಕಬ್ಬಿಣಾಂಶ ಹಾಗೂ ಕ್ಯಾಲ್ಸಿಯಂ ಮಾತ್ರೆ ಸೇವನೆಗೆ ಬೆಂಬಲ ಹಾಗೂ ಪ್ರತಿ ತಿಂಗಳು ಗರ್ಭಿಣಿಯರ ತೂಕ ಮತ್ತು ಲಸಿಕಾ ವೇಳಾಪಟ್ಟಿಯನ್ನು ಅನುಸರಣೆ ಮಾಡಲಾಗುತ್ತಿದೆ.

ಈ) ಎಷ್ಟು ಪ್ರಕರಣಗಳಲ್ಲಿ ದೂರು ದಾಖಲಾಗಿವೇ ಹಾಗೂ ಎಷ್ಟು ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಆಗಿದೆಯೇ; (ಜಿಲ್ಲಾವಾರು ಮಾಹಿತಿ ನೀಡುವುದು)

ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಲಾದ ಪ್ರಕರಣಗಳಲ್ಲಿ ದೂರು ದಾಖಲಾದ ಮತ್ತು ತಪ್ಪಿತಸ್ಥರಿಗೆ ಶಿಕ್ಷೆಯಾದ ಸಂಖ್ಯೆಗಳು ಈ ಕೆಳಕಂಡಂತಿವೆ ಹಾಗೂ ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ.

| | 2018-19 | 2019-20 | 2020-21 | 2021-22 | 2022-23 |
|---|---|---|---|---|---|
| ಪ್ರಕರಣಗಳಲ್ಲಿ ದೂರು ದಾಖಲಾದ ಸಂಖ್ಯೆ | 54 | 74 | 67 | 91 | 80 |
| ಈ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾದ ಸಂಖ್ಯೆ | 7 | 6 | 16 | 13 | 13 |

**ಸಂಖ್ಯೆ: HFW 65 STQ 2023**

**( ದಿನೇಶ್ ಗುಂಡೂರಾವ್ )**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು